ಶ್ರೀ ಕೆ. ಕಂಶಾಲ.—ಇಲ್ಲಿ ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ವಿಳಂಬವಾಗಂತ್ತಿಲ್ಲ ಎಂದರೆ ಹೇಳಿದ್ದಾರೆ. ಆದರೆ ಅಲ್ಲಿ ಒಂದು ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ಐ.ಆರ್.ಡಿ.ಪಿ.ಗೆ ಸಂಬಂಧಪಟ್ಟ ಅರ್ಜಿಗಳು ಸಹ ಪೆಂಡಿಂಗ್ ಇವೆ. ಮತ್ತೆ ಸುಳ್ಯದಲ್ಲಿ ವಿದ್ಯುತ್ ಮಂಡಳಿಯು ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ ಉಪ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ಹೇಳಿದ್ದಾರೆ. ಆದರೆ ಮಾನ್ಯ ಸಚಿವರ ಕ್ಷೇತ್ರದಲ್ಲಿ ಎರಡು ಉಪ ಕೇಂದ್ರಗಳಿವೆ. ಈ ವಿದ್ಯುತ್ ಮಂಡಳಿಯ ಆರ್ಥಿಕ ಪರಿಸ್ಥಿತಿ ಯಾವಾಗ ಸುಧಾರಣೆ ಆಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್.—ಸುಳ್ಯದಲ್ಲಿ ೧೧೦ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಡಬೇಕೆಂಬ ಗುರಿ ಇದ್ದರೂ ಸಹ ೧೨೮ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಡಲಾಗಿದೆ. ನಮ್ಮ ಗುರಿಗಿಂತ ೧೮ ಪಂಪ್ ಸೆಟ್ಟುಗಳಿಗೆ ಹೆಚ್ಚು ವಿದ್ಯುತ್ ಸಂಪರ್ಕ ಕೊಟ್ಟಿದ್ದೇವೆ. ನಮ್ಮ ಶಕ್ತಿಮೀರಿ ವಿದ್ಯುತ್ ಸಂಪರ್ಕ ಕೊಡುತ್ತಿದ್ದೇವೆ. ಆದರೆ ಅರ್ಜಿಗಳು ಹೆಚ್ಚು ಹೆಚ್ಚು ಬರುತ್ತಿವೆ. ನಮ್ಮ ವಿದ್ಯುತ್ ಮಂಡಲಿ ಏನು ಸರ್ವಶಕ್ತಿ ಅಲ್ಲ. ಈ ಕೆಲಸಕ್ಕೆ ಸೆಂಟ್ರಲ್ ಎಲಕ್ಟ್ರಿಸಿಟಿ ಅಥಾರಿಟಿ ಅವರ ಸಹಾಯವೂ ನಮಗೆ ಬೇಕಾಗುತ್ತದೆ. ಇಲ್ಲಿ ನಮ್ಮ ಗುರಿಗಿಂತ ಜಾಸ್ತಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಟ್ಟಿದ್ದೇವೆ. ಮತ್ತೆ ಸುಳ್ಯದಲ್ಲಿ ಸಬ್-ಸ್ಟೇಷನ್ ಪ್ರಾರಂಭ ಮಾಡುವ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಇನ್-ಪ್ರಿನ್ಸಿಪಲ್ ಒಪ್ಪಿಕೊಂಡಿದ್ದೇವೆ. ಈಗ ೧೭೬ ತಾಲ್ಲೂಕುಗಳ ಪೈಕಿ ೧೪ ತಾಲ್ಲೂಕುಗಳನ್ನು ಬಿಟ್ಟರೆ ಎಲ್ಲ ಕಡೆಯೂ ಸಬ್-ಸ್ಟೇಷನ್‌ಗಳಿವೆ. ಲೋಡ್ ಜಾಸ್ತಿ ಇರುವ ಕಡೆಗಳಲ್ಲಿ ಎರಡು ಸಬ್-ಸ್ಟೇಷನ್‌ಗಳಿವೆ. ಈ ನಮ್ಮ ವಿದ್ಯುತ್ ಮಂಡಲಿಯ ಆರ್ಥಿಕ ಪರಿಸ್ಥಿತಿ ಯಾವಾಗ ಸುಧಾರಣೆ ಆಗುತ್ತದೆಂದು ಕೇಳಿದ್ದಾರೆ. ಅದು ಸುಧಾರಣೆ ಆದಮೇಲೆ ಹೇಳುತ್ತೇನೆ.

ಶ್ರೀ ಕೆ. ಕುಶಾಲ.—ಇನ್‌ಸ್ಟಲೇಷನ್ ಒಂದು ಲಕ್ಷ ಮೀರಿದರೆ ಒಂದು ಸಬ್-ಸ್ಟೇಷನ್ ತೆರೆಯಬೇಕೆಂಬ ನಿಯಮವಿದ್ದರೂ ಸಹ ಸುಳ್ಯದಲ್ಲಿ ಏತಕ್ಕೆ ತೆರೆದಿಲ್ಲ? ತಮ್ಮ ಕ್ಷೇತ್ರದಲ್ಲಿ ಎರಡು ಸ್ಟೇಷನ್‌ಗಳಿರುವಾಗ ಇಲ್ಲಿ ಒಂದನ್ನು ಏತಕ್ಕೆ ತೆರೆಯಬಾರದು ?

ಶ್ರೀ ಜೆ.ಹೆಚ್. ಪಟೇಲ್.—ನನ್ನ ಕ್ಷೇತ್ರದಲ್ಲಿ ನಾನು ಮಂತ್ರಿಯಾದ ಮೇಲೆ ಈ ಸ್ಟೇಷನ್‌ಗಳು ಪ್ರಾರಂಭವಾಗಲಿಲ್ಲ. ಅವು ಮೊದಲೇ ಇದ್ದವು. ಇಲ್ಲಿ ಯಾರ ಕ್ಷೇತ್ರ ಯಾರ ತಾಲ್ಲೂಕು ಎಂಬ ಪ್ರಶ್ನೆ ಬರುವುದಿಲ್ಲ. ಇದು ಲೋಡ್ ಮೇಲೆ ಹೋಗುತ್ತದೆ. ಕೋಲಾರದಲ್ಲಿ ಇನ್ನೂ ಒಂದು ಸಬ್-ಸ್ಟೇಷನ್ ಪ್ರಾರಂಭ ಮಾಡಿದರೂ ಸಹ ಸಾಕಾಗುವುದಿಲ್ಲ. ಅಂತಹ ಪರಿಸ್ಥಿತಿ ಇದೆ. ಒಟ್ಟಿನಲ್ಲಿ ಸುಳ್ಯದ ಸ್ಥಿತಿಯನ್ನು ಗಮನಿಸಿ, ಅಲ್ಲಿನ ಪರಿಸ್ಥಿತಿಯನ್ನು ಆದಷ್ಟು ಬೇಗ ಸುಧಾರಣೆ ಮಾಡುತ್ತೇವೆ.

ನಂಜನಗೂಡು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಬಗ್ಗೆ

೭೭೨ (ಡಿ) **ಶ್ರೀ ಡಿ.ಟಿ. ಜಯಕುಮಾರ್** (ನಂಜನಗೂಡು).—ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೫-೫೬ನೇ ಸಾಲಿಗೆ ನಂಜನಗೂಡಿನ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವಿರುವುದಿಲ್ಲ ?

ಆ) ಇದುವರೆಗೆ ಎಷ್ಟು ಗ್ರಾಮಗಳಿಗೆ ವಿದ್ಯುತ್‌ಚ್ಛಕ್ತಿ ಪೂರೈಕೆಯಾಗಿದೆ.

ಇ) ಉಳಿದ ಹಳ್ಳಿಗಳಿಗೆ ಇನ್ನು ಎಷ್ಟು ಸಮಯದಲ್ಲಿ ವಿದ್ಯುತ್‌ಚ್ಛಕ್ತಿ ಸೌಲಭ್ಯ ಒದಗಿಸಲಾಗುವುದು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೨೪ ಗ್ರಾಮಗಳು.

ಆ) ೩೧-೧-೬೭ರವರೆವಿಗೆ ತಾಲ್ಲೂಕಿನ ೧೫೮ ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಾಗಿದೆ.

ಇ) ೪ ಗ್ರಾಮಗಳಿಗೆ ೩೧-೩-೬೭ರ ಒಳಗೂ ಉಳಿದ ೬ ಗ್ರಾಮಗಳಿಗೆ ಮುಂದಿನ ವರ್ಷದಲ್ಲಿ ಪೂರೈಸಲಾಗುತ್ತದೆ.

ಶ್ರೀ ಡಿ.ಟಿ. ಜಯಂಕುಮಾರ್.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯು (ಅ)ಗೆ ಉತ್ತರವಾಗಿ ೨೪ ಗ್ರಾಮಗಳು ಎಂದಿದ್ದಾರೆ. ಮತ್ತು ಇದೇ ಪ್ರಶ್ನೆಯ (ಇ)ಗೆ ಉತ್ತರವಾಗಿ ೪ ಗ್ರಾಮಗಳಿಗೆ ೩೧-೩-೧೯೮೭ರ ಒಳಗೂ ಉಳಿದ ೬ ಗ್ರಾಮಗಳಿಗೆ ಮುಂದಿನ ವರ್ಷದಲ್ಲಿ ಪೂರೈಸಲಾಗುತ್ತದೆ ಎಂದು ಹೇಳಿದ್ದಾರೆ. ಆಕ್ಷಿಗೆ ಒಟ್ಟು ೧೦ ಗ್ರಾಮಗಳು ಆದಹಾಗೆ ಆಯಿತು. ಇನ್ನು ಉಳಿದ ೧೪ ಗ್ರಾಮಗಳಿಗೆ ಯಾವಾಗ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಿಕೊಡುತ್ತೀರಾ ? ಜೊತೆಗೆ ೧೯೮೮ನೇ ಇಸವಿಯೊಳಗೆ ಕರ್ನಾಟಕ ರಾಜ್ಯದ ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿ ಪೂರೈಸಲಾಗುತ್ತದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರಿಂದ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ೧೯೮೮ನೇ ಇಸವಿಯೊಳಗೆ ಎಂದು ಹೇಳಿಲ್ಲ. ೧೯೮೮-೮೯ರ ಒಳಗಾಗಿ ಕರ್ನಾಟಕ ರಾಜ್ಯದಲ್ಲಿ ಉಳಿದಿರತಕ್ಕಂಥ ೬೬೦೦ ಗ್ರಾಮಗಳು ಏನು ಇವೆ ಅವಕ್ಕೆಲ್ಲಾ ಕೊಡುತ್ತೇವೆ, ಇದರಲ್ಲಿ ಹ್ಯಾಮಲೆಟ್ಸ್ ಸೇರಿಲ್ಲ. ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಪೂರೈಸುತ್ತೇವೆ. ನೂರು ಪರ್ಸೆಂಟ್ ಆಷ್ಟು ಮಾಡುತ್ತೇವೆ. ಈಗ ೨೪ ಗ್ರಾಮಗಳು ಅಂತ ಏನು ಹೇಳಿದ್ದೇವೆ, ಇದರಲ್ಲಿ ಈಗ ೧೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಕರ್ಯ ಒದಗಿಸಿಕೊಟ್ಟಿದ್ದೇವೆ, ಬಾಕಿ ಉಳಿದಿರತಕ್ಕಂಥ ಗ್ರಾಮಗಳಿಗೆ ಮುಂದಿನ ವರ್ಷ ಮಾಡಿಸಿಕೊಡುತ್ತೇವೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ ಹಳ್ಳಿಗಳಲ್ಲಿ ಜನತಾ ಮನೆಗಳನ್ನು ಕಟ್ಟಲಿಕ್ಕೆ ಸರ್ಕಾರ ಏನು ಮುಂಜೂರು ಮಾಡಿದೆಯೋ ಅದರ ಪಕ್ಕದ ಹಳ್ಳಿಗಳಲ್ಲಿ ನೋಡಿದರೆ ಅಲ್ಲೇ ಕರೆಂಟ್ ಇರುವುದಿಲ್ಲಾ ಆದುದರಿಂದ ಸರ್ಕಾರದವರು ಕಟ್ಟತಕ್ಕಂಥ ಎಲ್ಲಾ ಜನತಾ ಮನೆಗಳಿಗೂ ಕೂಡ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಏನಾದರೂ ಹಾಕಿಕೊಂಡಿದ್ದಾರೆಯೇ?

ಶ್ರೀ ಜೆ.ಹೆಚ್. ಪಟೇಲ್.—ಆ ವಿಚಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ.

ರಾಜ್ಯದಲ್ಲಿ ಅಂತರ್ಜಲ ಸಂಪನ್ಮೂಲದ ಸಂಪೂರ್ಣ ಬಳಕೆಯ ಬಗ್ಗೆ

೯೮೧. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಲಭ್ಯವಿರುವ ಅಂತರ್ಜಲ ಸಂಪನ್ಮೂಲ ಕುರಿತು ಹೊಸ ವೈಜ್ಞಾನಿಕ ವಿಧಾನದಿಂದ ಸಮೀಕ್ಷೆ ಮಾಡಿರುವುದು ನಿಜವೆ ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಲಭ್ಯವಿರುವ ಅಂತರ್ಜಲ ಸಂಪನ್ಮೂಲಗಳೆಷ್ಟು ?

ಇ) ಅಂತರ್ಜಲ ಸಂಪನ್ಮೂಲದ ಪೂರ್ಣ ಬಳಕೆಗಾಗಿ ಸರ್ಕಾರದವರು ಯಾವುದಾದರೂ ನಿರ್ದಿಷ್ಟ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ?

ಈ) ಹಾಗಿದ್ದಲ್ಲಿ ಅದರ ರೂಪುರೇಷೆಗಳೇನು ?

ಉ) ಧಾರವಾಡ ಜಿಲ್ಲೆಯಲ್ಲಿ ಲಭ್ಯವಿರುವ ಅಂತರ್ಜಲ ಸಂಪನ್ಮೂಲ ಪ್ರಮಾಣವೆಷ್ಟು ?

(ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಜೆ.ಎಸ್. ದೇಶಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ರಾಜ್ಯದ ಆಯ್ದ ಸ್ಥಳಗಳಲ್ಲಿ ಆಳದಲ್ಲಿ ಲಭ್ಯವಿರುವ ಅಂತರ್ಜಲ ನಿಕ್ಷೇಪದ ಸಮೀಕ್ಷೆಗಾಗಿ ಇಲಾಖೆಯ ದೂರ ಸಂವೇದನಾ ತಾಂತ್ರಿಕತೆಯನ್ನು ಅಳವಡಿಸಿ ಹಂತ ಹಂತವಾಗಿ ಸಮೀಕ್ಷೆನಡೆಸುವ ಯೋಜನೆಯನ್ನು ಹೊಂದಿದೆ.

ಆ) ಯೋಜನೆಯನ್ನು ಪೂರ್ಣ ಅನುಷ್ಠಾನಕ್ಕೆ ತದನಂತರ ಇದು ನಿರ್ಣಯವಾಗುತ್ತದೆ.

ಇ) ಹೌದು.

ಈ) ೧) ನೂರು ಬಾವಿಗಳ ಯೋಜನೆ.
೨) ಗಂಗಾ ಕಲ್ಯಾಣ ಯೋಜನೆ.
೩) ವಿಶೇಷ ಘಟಕ ಯೋಜನೆ.
೪) ನದಿ ಪಾತ್ರದಲ್ಲಿ ಸೋಸು ನೀರಾವರಿ ಬಾವಿಗಳ ಯೋಜನೆ.